SEPTEMBER 14, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಜನರ ಆಕಾಂಕ್ಷೆಗಳಿಗೆ ಸ್ಪಂದಿಸುವಲ್ಲಿ, ಲೋಕತಂತ್ರದ ಆತ್ಮ ಅಡಕವಾಗಿದೆ – ಲೋಕಸಭಾಧ್ಯಕ್ಷ ಓಂ ಬಿರ್ಲಾ.**
- **ಮಹಾದಾಯಿ ಹಾಗೂ ಮೇಕೆದಾಟು ಯೋಜನೆ; ಕೇಂದ್ರ ಸರ್ಕಾರದ ಮಧ್ಯಸ್ಥಿಕೆಗೆ, ರಾಜ್ಯದ ಮನವಿ.**
- **ಉತ್ತರಕನ್ನಡ ಹಾಗೂ ಚಾಮರಾಜ ನಗರದಲ್ಲಿ, ಬುಡಕಟ್ಟು ಗರ್ಭಿಣಿಯರಿಗಾಗಿ, 'ಜನನಕ್ಕೆ ಕಾಯುವ ಮನೆ' ಕಾರ್ಯಾರಂಭ.**
- **ಸರಕು ಮತ್ತು ಸೇವಾ ತೆರಿಗೆ; ಜೀವ ವಿಮೆ ಹಾಗೂ ಜೀವ ರಕ್ಷಕ ಔಷಧಗಳ ಪರಿಷ್ಕೃತ ದರ, ಇದೇ 22 ರಿಂದ ಜಾರಿಗೆ.**

<><><>

**ಈಗ ವಾರ್ತೆಗಳ ವಿವರ**

<><><>

**ಲೋಕತಂತ್ರದ ಆತ್ಮ, ಕೇವಲ ಚುನಾವಣೆ ಅಥವಾ ನಿಯಮಿತ ಸಭೆಗಳಲ್ಲಿ ಅಡಕವಾಗಿಲ್ಲ;ತನ್ಮೂಲಕ ಜನರ ಆಕಾಂಕ್ಷೆ ಹಾಗೂ ಅಪೇಕ್ಷೆಗಳಿಗೆ, ಸ್ಪಂದಿಸುವ ಹೊಣೆ ಬೆಸೆದುಕೊಂಡಿದೆ ಎಂದು, ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಬೆಂಗಳೂರಿನಲ್ಲಿ 3 ದಿನಗಳ ಕಾಲ ಜರುಗಿದ, 11ನೇ ಕಾಮನ್ ವೆಲ್ತ್ ಸಂಸದೀಯ ಸಂಘದ, ಭಾರತ ವಲಯ ಸಮ್ಮೇಳನದ, ಸಮಾರೋಪದಲ್ಲಿ ಅವರು ಮಾತನಾಡಿದರು. ಭಾರತೀಯ ಪ್ರಜಾಪ್ರಭುತ್ವ, ಸರ್ವರ ಹಿತಕ್ಕಾಗಿ ಹಾಗೂ ಎಲ್ಲರ ಸುಖಕ್ಕಾಗಿ ಎಂಬ ಧ್ಯೇಯದೊಂದಿಗೆ, ಜನರ ವಿಶ್ವಾಸವನ್ನು ಸುದೃಢಗೊಳಿಸಿ, ರಚನಾತ್ಮಕ, ಪಾರದರ್ಶಕ, ಸಕ್ರಿಯ ಜನ ಸಹಭಾಗಿತ್ವವನ್ನು, ಖಾತ್ರಿಪಡಿಸಲು ಶ್ರಮಿಸುತ್ತಿದೆ, ಎಂದರು. ರಾಜ್ಯಸಭೆ ಉಪ ಸಭಾಪತಿ ಹರಿವಂಶ ನಾರಾಯಣ ಸಿಂಗ್, ರಾಜ್ಯಪಾಲ ಥಾವರಚಂದ ಗೆಹ್ಲೋಟ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.**

<><><>

ಮಹಾದಾಯಿ ನದಿ ಹಾಗೂ ಕಳಸಾ ಬಂಡೂರಿ ನಾಲಾ ನೀರು ಹಂಚಿಕೆ ಯೋಜನೆಗೆ, ಗೋವಾ ಸರ್ಕಾರ ಮತ್ತು ಮೇಕೆದಾಟು ಯೋಜನೆಗೆ, ತಮಿಳುನಾಡು ಸರ್ಕಾರ, ವಿರೋಧ ವ್ಯಕ್ತ ಪಡಿಸುತ್ತಿದ್ದು, ರಾಜ್ಯದ ನ್ಯಾಯಯುತ, ಪಾಲಿನ ನೀರು ಬಳಸಿಕೊಳ್ಳಲು, ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ, ಅನುಕೂಲ ಕಲ್ಪಿಸಬೇಕು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನಲ್ಲಿ ಆಗ್ರಹಿಸಿದ್ದಾರೆ.

<><><>

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು ಶಿವನಸಮುದ್ರದ ಗಗನಚುಕ್ಕಿ ಜಲಪಾತೋತ್ಸವ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ, ಮೇಕೆದಾಟು ಅಣೆಕಟ್ಟೆಯಿಂದ, 66 ಟಿ.ಎಂ.ಸಿ. ಅಡಿ ನೀರು ಶೇಖರಿಸಲು ಸಾಧ್ಯ. ಮಳೆ ಬಾರದಿದ್ದಾಗ ತಮಿಳುನಾಡಿಗೆ ನೀರು ಪೂರೈಸಲು ಸಹ ಅನುಕೂಲವಾಗಲಿದೆ, ಎಂದರು.

ತಮಿಳುನಾಡಿಗೆ 177 ದಶಾಂಶ 2-5 ಟಿ.ಎಂ.ಸಿ. ಅಡಿ ನೀರನ್ನು ಕರ್ನಾಟಕ ಒದಗಿಸಬೇಕಿದೆ. ಮೇಕೆದಾಟು ಯೋಜನೆಗೆ ತಮಿಳುನಾಡು ಅಡ್ಡಿ ಪಡಿಸುವುದು, ನ್ಯಾಯಸಮ್ಮತವಲ್ಲ ಎಂದರು.

<><><>

ರಾಜ್ಯಸಭಾ ಸಂಸದ ಹಾಗೂ ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ಅವರು, ಹಾಸನದ ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಮೃತಪಟ್ಟವರ ಕುಟುಂಬಗಳಿಗೆ, 10 ಲಕ್ಷ ರೂಪಾಯಿ ಪರಿಹಾರ ನೀಡುವಂತೆ, ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಸಾವಿನ ಸಂಖ್ಯೆ ನಿನ್ನೆಗೆ 10ಕ್ಕೆ ಏರಿಕೆಯಾಗಿದೆ.

<><><>

ಉತ್ತರಕನ್ನಡ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ, ಕೇಂದ್ರ ಪುರಸ್ಕೃತ, ರಾಷ್ಟ್ರೀಯ ಆರೋಗ್ಯ ಯೋಜನೆ ಅಡಿ, ಬುಡಕಟ್ಟು ಸಮುದಾಯದ ಗರ್ಭಿಣಿಯರಿಗೆ, ಸುರಕ್ಷಿತ ಹೆರಿಗೆ ಹಾಗೂ ಆರೋಗ್ಯಪೂರ್ಣ ಮಗುವಿಗಾಗಿ, 'ಜನನಕ್ಕೆ ಕಾಯುವ ಮನೆಗಳು', ಪ್ರಾಯೋಗಿಕವಾಗಿ, ಕಾರ್ಯಾರಂಭಿಸಿವೆ ಎಂದು, ಉತ್ತರಕನ್ನಡ ಜಿಲ್ಲೆ ಸಂತಾನೋತ್ಪತ್ತಿ ಆರೋಗ್ಯ ಹಾಗೂ ಮಕ್ಕಳ ಆರೋಗ್ಯಾಧಿಕಾರಿ, ನಟರಾಜ ತಿಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ಮಾಹಿತಿ ನೀಡಿದ್ದಾರೆ.

<><><>

ಡಾ. ನಟರಾಜ ಧ್ವನಿ 48 ಸೆಕೆಂಡುಗಳು

<><><>

ಬೀದರ ಜಿಲ್ಲೆ, ಔರಾದ್ ತಾಲೂಕಿನ, ವಿನೋದ ಬಿರಾದಾರ, ಅರಿವು ಕೇಂದ್ರದ ಸವಲತ್ತು ಬಳಸಿಕೊಂಡು, ಆನ್ಲೈನ್ ಮೂಲಕ, ಹೆಚ್ಚಿನ ಅಧ್ಯಯನ ನಡೆಸಿ, ದಕ್ಷಿಣ ಆಫ್ರಿಕಾದ ಬಹುರಾಷ್ಟ್ರೀಯ ಕಂಪೆನಿಯಲ್ಲಿ ಉದ್ಯೋಗ ಪಡೆದಿದ್ದಾರೆ. ಅರಿವು ಕೇಂದ್ರಗಳು, ಜನರ ಜ್ಞಾನವನ್ನು ಉನ್ನತೀಕರಿಸಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಸರಿ ಸಮನಾಗಿ ಹೆಜ್ಜೆ ಹಾಕುವಲ್ಲಿ, ಈಗ ಸಾಧನಾ ಕೇಂದ್ರಗಳಾಗಿವೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ, ಹರ್ಷ ವ್ಯಕ್ತ ಪಡಿಸಿದ್ದಾರೆ. ಗ್ರಾಮೀಣ ಗ್ರಂಥಾಲಯಗಳನ್ನು ಡಿಜಿಟಲ್ ಪರಿಕರಗಳೊಂದಿಗೆ ಉನ್ನತೀಕರಿಸಿ, ಜನಸ್ನೇಹಿ ಅರಿವು ಕೇಂದ್ರಗಳನ್ನಾಗಿ ರೂಪಿಸಿದ, ತಮ್ಮ ಯೋಜನೆಯನ್ನು ಬಳಸಿಕೊಂಡು, ಪ್ರತಿಭಾವಂತ ಗ್ರಾಮೀಣ ಯುವಜನತೆ, ಭವಿ ್ಯ ರೂಪಿಸಿಕೊಂಡ, ಹಲವು ಯಶೋಗಾಥೆಗಳು, ತಮಗೆ ಪ್ರೇರಣೆ ನೀಡಿವೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಹೇಳಿದ್ದಾರೆ. ಯೋಜನೆಯೊಂದು, ಜನರ ಬದುಕಿನಲ್ಲಿ ಹೊಸ ಚೈತನ್ಯ ತುಂಬಿದಾಗ, ಸರ್ಕಾರಕ್ಕೆ ಸಂಭ್ರಮದ ಸಂಗತಿಯಾಗುತ್ತದೆ ಎಂದು, ಸಚಿವ ಖರ್ಗೆ ಶ್ಲಾಘಿಸಿದ್ದಾರೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಮಂಡಳಿ 56ನೇ ಸಭೆ ಶಿಫಾರಸಿನಂತೆ, ಪರಿಷ್ಕೃತ ದರಗಳು, ಈ ತಿಂಗಳ 22ನೇ ತಾರೀಖು, ನವರಾತ್ರಿಯ ಮೊದಲ ದಿನದಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ.

<><><>

ಜೀವ ವಿಮೆ ವಯಕ್ತಿಕ ಪಾಲಿಸಿಗಳ ಮೇಲಿನ ತೆರಿಗೆಯನ್ನು, ಶೂನ್ಯಕ್ಕೆ ಇಳಿಸಲಾಗಿದೆ. ಜೀವ ವಿಮೆಗಳು 22ನೇ ತಾರೀಖಿನ ಬಳಿಕ, ತೆರಿಗೆ ಮುಕ್ತಗೊಳ್ಳಲಿವೆ. ಯುನಿಟ್ ಲಿಂಕ್ಡ್ ಇನ್ಸುರನ್ಸ್ ಪ್ಲಾನ್, ಎಂಡೊವ್‌ಮೆಂಟ್ ಪಾಲಿಸಿ, ಕೌಟುಂಬಿಕ ವಿಮೆ ಪಾಲಿಸಿಗಳು, ಹಿರಿಯ ನಾಗರಿಕರ ಜೀವ ವಿಮೆ ಪಾಲಿಸಿಗಳ ಮೇಲಿನ ಜಿ.ಎಸ್.ಟಿ. ತೆರಿಗೆಯನ್ನು, ಶೂನ್ಯಕ್ಕೆ ಇಳಿಸಲಾಗುತ್ತಿದೆ.

<><><>

33 ಜೀವ ರಕ್ಷಕ ಔಷಧಿಗಳ ಮೇಲೆ, ಪ್ರಸ್ತುತ ವಿಧಿಸಲಾದ, ಶೇಕಡ 12 ರಷ್ಟು ಜಿ.ಎಸ್.ಟಿ. ತೆರಿಗೆಯನ್ನು, 22ನೇ ತಾರೀಖಿನ ಬಳಿಕ, ಶೂನ್ಯಕ್ಕೆ ಇಳಿಸಲು, ನಿರ್ಧರಿಸಲಾಗಿದೆ. ಇನ್ನಿತರೆ ಔಷಧಿಗಳ ಮೇಲೆ ಆಕರಿಸಲಾಗುತ್ತಿರುವ, ಶೇಕಡ 12 ರಷ್ಟು ಜಿ.ಎಸ್.ಟಿ. ತೆರಿಗೆಯನ್ನು ಕೂಡ, ಶೇಕಡ 5ಕ್ಕೆ ಇಳಿಸಲಾಗಿದೆ.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.. ಧಾರವಾಡ ಜಿಲ್ಲೆ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್, ನಿಕಟಪೂರ್ವ ಕಾರ್ಯದರ್ಶಿ, ಎಂ.ಜಿ. ಮಠಪತಿ.

<><><>

ಎಂ.ಜಿ. ಮಠಪತಿ ಧ್ವನಿ 47 ಸೆಕೆಂದುಗಳು

<><><>

‘ಪೌಷ್ಟಿಕ ಆಹಾರ ಭದ್ರತೆಗೆ, ಮಣ್ಣಿನ ಆರೋಗ್ಯ ಹಾಗೂ ಸಾಂಪ್ರದಾಯಿಕ ತಳಿಗಳು’ ಶೀರ್ಷಿಕೆಯಡಿ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ನಾಲ್ಕು ದಿನಗಳ, ಕೃಷಿ ಮೇಳಕ್ಕೆ, ಚಾಲನೆ ನೀಡಿದೆ.

<><><>

ಪ್ರಥಮ ದಿನವಾದ ನಿನ್ನೆ, ಸಾಂಪ್ರದಾಯಿಕ ತಳಿಗಳ ಪ್ರಾಮುಖ್ಯತೆ ಹಾಗೂ ಸಂರಕ್ಷಣೆ ವಿಚಾರಗೋಷ್ಠಿಯಲ್ಲಿ, 260ಕ್ಕೂ ಹೆಚ್ಚು ದೇಸಿ ಭತ್ತದ ತಳಿಗಳ ಸಂರಕ್ಷಕ, ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ಗುಂಡೇನಟ್ಟಿಯ ಶಂಕರ ಲಂಗಟಿ, ತಮ್ಮ ಮೂವತ್ತು ವರ್ಷಗಳ, ಸಾಂಪ್ರದಾಯಿಕ ತಳಿಗಳ ಸಂಗ್ರಹ ಮತ್ತು ಸಂರಕ್ಷಣೆಯ ಸುದೀರ್ಘ ಅನುಭವ ಹಂಚಿಕೊಂಡರು.

<><><>

ಕೃಷಿ ಮೇಳದ ಮುಖ್ಯ ವೇದಿಕೆಯಲ್ಲಿ, ಪ್ರಗತಿಪರ ಕೃಷಿಕರಾದ, ಗದಗ ಜಿಲ್ಲೆ ಶಿರೋಳದ, ಮೃತ್ಯುಂಜಯ ವಸ್ತ್ರದ, ಶ್ಯಾಗೋಟಿಯ ಅಶೋಕ ಹಳ್ಳಿ, ಧಾರವಾಡ ಜಿಲ್ಲೆ, ಗಾಮನಗಟ್ಟಿಯ ಈಶ್ವರಪ್ಪ ಮಾಳಣ್ಣವರ, ಹಾವೇರಿ ಜಿಲ್ಲೆ, ಕುನ್ನೂರಿನ ಶಂಕರ ಸೊಗಲಿ ಹಾಗೂ ಕುರಬರ ಮಲ್ಲೂರ ಗ್ರಾಮದ ಶಿವಪ್ಪ ಗೋಣಿ, ಉತ್ತರಕನ್ನಡ ಜಿಲ್ಲೆಯ ರಮೇಶ ಹೆಗಡೆ, ತಮ್ಮ ಕೃಷಿ ಸಾಧನೆ ಹಂಚಿಕೊಂಡರು.

<><><>

ಫಲ–ಪುಷ್ಪ ಪ್ರದರ್ಶನಕ್ಕೆ, ಒಂದು ಲಕ್ಷಕ್ಕೂ ಹೆಚ್ಚು ಜನ. ಮೊದಲ ದಿನವೇ ಭೇಟಿ ನೀಡಿ, ವೀಕ್ಷಿಸಿದ್ದು ವಿಶೇಷ.

<><><>

ಕ್ಯೂಆರ್. ಕೋಡ್ ಬಳಸಿ, 25 ಸಾವಿರಕ್ಕೂ ಅಧಿಕ ಜನ, ಕೃಷಿ ಮೇಳಕ್ಕೆ ತಮ್ಮ ಹೆಸರು ನೊಂದಾಯಿಸಿದ್ದಾರೆ.

<><><>

ಅಡಕೆ ಕೃಷಿಕರಿಗೆ ಅನುಕೂಲ ಕಲ್ಪಿಸಲು, ಅಂತಾರಾಜ್ಯ ಸಹಕಾರಿ ಸಂಸ್ಥೆ, ಕ್ಯಾಂಪ್ಕೋ, ಸಾವಯವ ಗೊಬ್ಬರ ಉತ್ಪಾದಿಸಲಿದೆ ಎಂದು, ಕ್ಯಾಂಪ್ಕೋ ಅಧ್ಯಕ್ಷ ಕಿಶೋರಕುಮಾರ ಕೊಡ್ಗಿ ತಿಳಿಸಿದ್ದಾರೆ. ಮಂಗಳೂರಿನಲ್ಲಿ ನಡೆದ, ಕ್ಯಾಂಪ್ಕೋ 51ನೇ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದರು. ಚಿತ್ರದುರ್ಗದ ಹಿರಿಯೂರಿನಲ್ಲಿ, 18 ಎಕರೆ ಜಾಗ ಖರೀದಿಸಲು ನಿರ್ಧರಿಸಿದೆ. ಸಾವಯವ ಉತ್ಪನ್ನಗಳಿಗೆ ಒತ್ತು ನೀಡಬೇಕೆಂಬ, ಪ್ರಧಾನಮಂತ್ರಿಗಳ ಆಶಯ ಈಡೇರಿಸಲು, ಕ್ಯಾಂಪ್ಕೋ ಬದ್ಧವಾಗಿದೆ ಎಂದರು. 2024–25ನೇ ಸಾಲಿನಲ್ಲಿ, ಕ್ಯಾಂಪ್ಕೋ 51 ಕೋಟಿ 85 ಲಕ್ಷ ರೂಪಾಯಿ ಲಾಭ ದಾಖಲಿಸಿದೆ. 3 ಸಾವಿರದ 632 ಕೋಟಿ ರೂಪಾಯಿ ವ್ಯವಹಾರ ಕೈಗೊಂಡು, ಸದಸ್ಯ ಗ್ರಾಹಕರಿಗೆ ಶೇಕಡ 8 ರಷ್ಟು ಲಾಭಾಂಶ ಪ್ರಕಟಿಸಿದೆ ಎಂದರು.

<><><>

ಕೇಂದ್ರ ಸರ್ಕಾರದ, ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ನಿರ್ವಹಣೆಯಲ್ಲಿ ಗುಣಮಟ್ಟವನ್ನು ಕಾಪಾಡಬೇಕು; ಅನುದಾನ ಸದ್ಬಳಕೆಯಾಗಬೇಕೆಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಸೂಚಿಸಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ, ದಿಶಾ ತ್ರೈಮಾಸಿಕ ಸಭೆಯ, ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಕೇಂದ್ರ ಪುರಸ್ಕೃತ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ, ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯ ಎಂದರು.

<><><>

ಕನ್ನಡ ಭಾಷೆಯ ಹಿರಿಯ ವಿದ್ವಾಂಸ, ಜೆ.ಎಂ. ನಾಗಯ್ಯ ಅವರ, ಸಾಹಿತ್ಯಾವಲೋಕನ ಕುರಿತ, ಒಂದು ದಿನದ ವಿಚಾರ ಸಂಕಿರಣ ಮತ್ತು, ಅವರ 4 ಗ್ರಂಥಗಳ ಬಿಡುಗಡೆ ಸಮಾರಂಭ, ಇಂದು ಧಾರವಾಡದ ಕರ್ನಾಟಕ ವಿದ್ಯಾ ವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ಜರುಗಲಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿ, ಡಿ.ವ್ಹಿ.ಪರಮಶಿವಮೂರ್ತಿ, ಇಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಉದ್ಘಾಟಿಸುವರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಜನರ ಆಕಾಂಕ್ಷೆಗಳಿಗೆ ಸ್ಪಂದಿಸುವಲ್ಲಿ, ಲೋಕತಂತ್ರದ ಆತ್ಮ ಅಡಕವಾಗಿದೆ – ಲೋಕಸಭಾಧ್ಯಕ್ಷ ಓಂ ಬಿರ್ಲಾ.
- ಮಹಾದಾಯಿ ಹಾಗೂ ಮೇಕೆದಾಟು ಯೋಜನೆ; ಕೇಂದ್ರ ಸರ್ಕಾರದ ಮಧ್ಯಸ್ಥಿಕೆಗೆ, ರಾಜ್ಯದ ಮನವಿ.
- ಉತ್ತರಕನ್ನಡ ಹಾಗೂ ಚಾಮರಾಜ ನಗರದಲ್ಲಿ, ಬುಡಕಟ್ಟು ಗರ್ಭಿಣಿಯರಿಗಾಗಿ, 'ಜನನಕ್ಕೆ ಕಾಯುವ ಮನೆ' ಕಾರ್ಯಾರಂಭ.
- ಸರಕು ಮತ್ತು ಸೇವಾ ತೆರಿಗೆ; ಜೀವ ವಿಮೆ ಹಾಗೂ ಜೀವ ರಕ್ಷಕ ಔಷಧಗಳ ಪರಿಷ್ಕೃತ ದರ, ಇದೇ 22 ರಿಂದ ಜಾರಿಗೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>